sdmimd

**KANNADIGARA PRAJANUDI**

Date: Saturday, March 22, 2014 Page:8

Edition: Mysore Language: Kannada

# ದೇಶದ ಅಭಿವೃದ್ಧಿಯನ್ನು ಆಯಾ ದೇಶದ ಸಂಸ್ಥೆ ನಿರ್ಧರಿಸುತ್ತದೆ

**ಮೈಸೂರು, ಮಾ.21–** ಒಂದು ದೇಶದ ಅಭಿವೃದ್ಧಿಯನ್ನು ಆಯಾ ದೇಶದ ಅತ್ಯುತ್ತಮ ಸಂಸ್ಥೆಗಳು ನಿರ್ಧರಿಸುತ್ತದೆ ಎಂದು ಮೈಂಡ್‌ಟ್ರೀ ಸಂಸ್ಥೆ ಅಧ್ಯಕ್ಷ ಸುಬ್ರೊತೊ ಬಗಚಿ ಅಭಿಪ್ರಾಯಪಟ್ಟರು.

ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣ ಅಭಿವೃದ್ಧಿ ಸಂಸ್ಥೆಯ (ಎಸ್‌ಡಿಎಂಐಎಂಡಿ) 2012–14ನೇ ಸಾಲಿನ ಪೋಸ್ಟ್ ಗ್ರಾಜುವೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ)ನ 19ನೇ ಘಟಿಕೋತ್ಸವ ಸಮಾರಂಭದಲ್ಲಿ ಶುಕ್ರವಾರ ಘಟಿಕೋತ್ಸವ ಭಾಷಣ ಮಾಡಿದರು.

ಯಾವುದೇ ದೇಶ ಪ್ರಗತಿ ಹೊಂದಲು ಉತ್ತಮ ಸಂಸ್ಥೆಗಳ ಅವಶ್ಯಕತೆ ಇದೆ. ಇಂದು ಜಪಾನ್ ಪ್ರಧಾನಿ ಯಾರೆಂದು ಪ್ರಶ್ನಿಸಿದರೆ ಶೇ.99 ಮಂದಿಯ ಬಳಿ ಉತ್ತರವಿಲ್ಲ. ಆದರೆ ಜಪಾನ್‌ನ ಅತ್ಯುತ್ತಮ ಕಂಪನಿಗಳ ಹೆಸರು ಹೇಳಿ ಎಂದು ಕೇಳಿದರೆ ವಿದ್ಯಾರ್ಥಿಗಳು ಐದು ಅತ್ಯುತ್ತಮ ಕಂಪನಿಗಳ ಹೆಸರು ಹೇಳುತ್ತಾರೆ. ಒಂದು ದೇಶದ ಅಭಿವೃದ್ಧಿಯನ್ನು ಆಯಾ ದೇಶದ ಅತ್ಯುತ್ತಮ ಸಂಸ್ಥೆಗಳು ನಿರ್ಧರಿಸುತ್ತದೆ. ಹೀಗಾಗಿ ದೇಶದ ಪ್ರಧಾನಿ ಯಾರೆಂಬ ವಿಚಾರ ಮುಖ್ಯವಲ್ಲ. ದೇಶದಲ್ಲಿ ಉತ್ತಮ ಸಂಸ್ಥೆಗಳು ಎಷ್ಟು ಇವೆ ಎಂಬುದು ಮುಖ್ಯ ಎಂದರು.

ನಾವು ಎಷ್ಟೇ ಶಿಕ್ಷಣ ಪಡೆದರೂ ಮುಖ್ಯವಾಗಿ ನಮ್ಮ ಮನದಲ್ಲಿ ಅನುಕಂಪ ಮತ್ತು ಸೇವಾ ಮನೋಭಾವ ಇರಬೇಕು. ಅನುಕಂಪ ಮತ್ತು ಸೇವಾ ಮನೋಭಾವ ಇದ್ದರೆ ಮಾತ್ರ ಮತ್ತೊಬ್ಬರಿಗೆ ಸೇವೆ ಒದಗಿಸಲು ಸಾಧ್ಯ. ಇಲ್ಲದಿದ್ದರೆ ನಮ್ಮ ಶಿಕ್ಷಣ ಸಾರ್ಥಕತೆ ಪಡೆಯಲು ಸಾಧ್ಯವಿಲ್ಲ ಎಂದರು.




ಈ ಸಂದರ್ಭದಲ್ಲಿ 2012–14ನೇ ಸಾಲಿನ ಪೋಸ್ಟ್ ಗ್ರಾಜುವೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್‌ನ 178 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವರುಣ್ ಕುಮಾರ್, ದೀಪಕ್ ನೆಸರಿಕರ್, ವಾಸುದೇವ್ ನಾಯಕ್, ಸ್ಫೂರ್ತಿ.ಎಸ್.ಗೌಡ, ಜುತಿಕಾ ಕಾಂದಾರ್ ಚಿನ್ನದ ಪದಕ ಪಡೆದರು.

ಎಸ್‌ಡಿಎಂಐಎಂಡಿಯ ಪಿಜಿಡಿಎಂ ಅಧ್ಯಕ್ಷೆ ನೀತು ಗಣಪತಿ, ವಾಣಿಜ್ಯೋದ್ಯಮಿ ಆರ್.ಗುರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಿವೃತ್ತ ನಿರ್ದೇಶಕ ಡಾ. ಕೆ.ಆರ್.ಶ್ರೀನಿವಾಸ ಮೂರ್ತಿ, ನಿವೃತ್ತ ಪ್ರೊಫೇಸರ್ ಡಾ. ಪ್ರಸನ್ನಚಂದ್ರ, ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಉಪ ನಿರ್ದೇಶಕಿ ಡಾ.ಎಚ್. ಗಾಯತ್ರಿ, ಉಜಿರೆಯ ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಪ್ರೊ.ಎಸ್. ಪ್ರಭಾಕರ್ ಹಾಜರಿದ್ದರು.